ಓ ಎಸ್ ನಂಃ 220-15
ಡಿ ಡಬ್ಲ್ಯೂ ಃ 1

ದಿಃ 18-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಸಿ ಕೆ ವಕೀಲರಿಂದ

19. ನನ್ನ ತಂದೆಯ ಹೆಸರು ನರಸಿಂಹಯ್ಯ ಆಗಿರುತ್ತದೆ. ನನ್ನ ತಂದೆಗೆ ಸಹೋದರರು ಇರುವುದಿಲ್ಲ. ನನ್ನ ತಂದೆಯ ತಂದೆ ಹೆಸರು ವೀರನರಸಿಂಹಯ್ಯ ಆಗಿರುತ್ತದೆ. ನಾವು ಮೂಲತಃ ಕೂಡ್ಲೂರು ಗ್ರಾಮದ ವಾಸಿಗಳು ಎಂದರೆ ನಿಜ. ವೀರನರಸಿಂಹಯ್ಯರವರು ವ್ಯವಸಾಯಗಾರರು ಆಗಿದ್ದರು. ನಮ್ಮ ಕುಟುಂಬದ ಮೂಲ ವಂಶಸ್ಥರು ವೀರನರಸಿಂಹಯ್ಯ ಆಗಿರುತ್ತಾರೆ. ವೀರನರಸಿಂಹಯ್ಯ ನವರು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ಅವರು ತೀರಿಕೊಳ್ಳುವಾಗ ನಾನು ಜನಿಸಿರಲಿಲ್ಲ. ವೀರನರಸಿಂಹಯ್ಯರವರು ತೀರಿಕೊಳ್ಳುವಾಗ ನನ್ನ ಸಹೋದರ ಸಹೋದರಿಯರು ಜನಿಸಿರಲಿಲ್ಲ. ವೀರನರಸಿಂಹಯ್ಯರವರಿಗೆ ಸರ್ವೆ ನಂ 22 ರಲ್ಲಿ 8 ಎಕರೆ 09 ಗುಂಟೆ, ಸರ್ವೆ ನಂ 18/5 ರಲ್ಲಿ 1 ಎಕರೆ 33 ಗುಂಟೆ ಇತ್ತು. ಈ ಎರಡು ಆಸ್ತಿಗಳಿಗೆ ವೀರನರಸಿಂಹಯ್ಯರವರು ಮಾಲೀಕರಾಗಿದ್ದರು. ವೀರನರಸಿಂಹಯ್ಯರವರು ತೀರಿಕೊಂಡ ನಂತರ ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಬಂದಿರುತ್ತವೆ. ನನ್ನ ತಂದೆ ವ್ಯವಸಾಯ ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲ. ನನ್ನ ತಂದೆಗೆ 13 ಜನ ಮಕ್ಕಳು ಇರುತ್ತಾರೆ. ಅದರಲ್ಲಿ 3 ಜನ ಮಕ್ಕಳು ಚಿಕ್ಕವರಿರುವಾಗಲೇ ತೀರಿಕೊಂಡಿದ್ದು 10 ಜನ ಮಕ್ಕಳು ಉಳಿದುಕೊಂಡಿರುತ್ತೇವೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಅವರು ಮಲ್ಲಮ್ಮ ಮತ್ತು ಚಿಕ್ಕಮ್ಮ ಆಗಿರುತ್ತದೆ. ಮಲ್ಲಮ್ಮರವರಿಗೆ ಸಂತಾನ ಇರಲಿಲ್ಲ ಎಂದರೆ ನಿಜ. ನಾವು 10 ಜನ ಮಕ್ಕಳು ಎರಡನೇ ಹೆಂಡತಿಯಾದ 2 ನೇ ಪ್ರತಿವಾದಿಯ ಮಕ್ಕಳು ಎಂದರೆ ನಿಜ. 3 ರಿಂದ 11 ನೇ ಪ್ರತೀವಾದಿಗಳು ಚಿಕ್ಕಮ್ಮರವರ ಮಕ್ಕಳು ಎಂದರೆ ನಿಜ. ಲಕ್ಷ್ಮಮ್ಮರವರು ತೀರಿಕೊಂಡಿರುತ್ತಾರೆ ಎಂದರೆ ನಿಜ. ಲಕ್ಷ್ಮಮ್ಮರವರಿಗೆ ಸಂತಾನ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 1987 ರಲ್ಲಿ ತೀರಿಕೊಂಡಿರುತ್ತಾರೆ. ಲಕ್ಷ್ಮಮ್ಮರವರು ತೀರಿಕೊಂಡು 8-10 ವರ್ಷ ಆಗಿರುತ್ತದೆ. ನಾನು ದಿನಾಂಕಃ 05-05-1952 ರಂದು ಜನಿಸಿರುತ್ತೇನೆ. ನನ್ನ ತಂದೆ ತೀರಿಕೊಳ್ಳುವಾಗ ನನ್ನ ವಯಸ್ಸು 35 ವರ್ಷ ಎಂದರೆ ನಿಜ.

20. ನನ್ನ ತಂದೆ ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ನೋಡಿಕೊಂಡಿದ್ದರು ಎಂದರೆ ನಿಜ. ನನ್ನ ತಂದೆ ನನ್ನ ಮತ್ತು ನನ್ನ ಸಹೋದರ ಸಹೋದರಿಯರ ವಿವಾಹ ಮಾಡಿರುತ್ತಾರೆ ಎಂದರೆ ನಿಜ. ನನ್ನ ತಂದೆ ಜೀವಂತವಿದ್ದಾಗ ನಾವೆಲ್ಲರೂ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ನಿಜ. ನನ್ನ ತಂದೆ ತೀರಿಕೊಂಡ ನಂತರವೂ ಸಹ ನಾವೆಲ್ಲಾ ಒಟ್ಟು ಕುಟುಂಬದಲ್ಲಿದ್ದೇವೆ ಎಂದರೆ ನಿಜ. 3 ನೇ ಪ್ರತಿವಾದಿ, 7 ನೇ ಪ್ರತಿವಾದಿ

ಕೂಡ್ಲೂರಿನಲ್ಲಿ ವ್ಯವಸಾಯ ಮಾಡುತ್ತಾರೆ. ನಾನು 1970 ರಲ್ಲಿ ಬೆಂಗಳೂರಿಗೆ ಬಂದಿರುತ್ತೇನೆ. 1970 ರಲ್ಲಿ ನನ್ನ ವಿದ್ಯಾಭ್ಯಾಸ ಮುಗಿದಿದ್ದು ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿರುತ್ತೇನೆ. ನಾನು ಬೆಂಗಳೂರಿನ ಖಾಸಗಿ ಕಂಪನಿಯಾದ ಎವರೆಸ್ಟ್ ಕಂಟೈನರ್ ಕಾರ್ಪೋರೇಷನ್ ನಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ನನಗೆ ದಿವಸಕ್ಕೆ 2 1/4 ರೂ ಸಂಬಳ ಕೊಡುತ್ತಿದ್ದರು. ನಾನು ಆ ಕಂಪನಿಯಲ್ಲಿ 1977 ರವರೆಗೆ 7 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ. ನನಗೆ ಬಂದ ಸಂಬಳವನ್ನು ಒಟ್ಟು ಕುಟುಂಬಕ್ಕಾಗಿ ಉಪಯೋಗ ಮಾಡುತ್ತಿದ್ದೆ.

21. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಒಟ್ಟು ಕುಟುಂಬವನ್ನು ನಾವು ನಾಲ್ಕು ಜನ ಸಹೋದರರು ನೋಡಿಕೊಳ್ಳುತ್ತಿದ್ದೆವು. ಈಗಲೂ ಸಹ ವಾದಿಗಳು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿದ್ದಾರೆ ಎಂದರೆ ನಿಜ. 7 ನೇ ಪ್ರತಿವಾದಿ 8 ನೇ ತರಗತಿಯವರೆಗೆ ಓದಿದ್ದು ಅವರು ಕೂಡ್ಲೂರಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. 11 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಬಿ ಇ ಎಲ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. 7 ನೇ ಪ್ರತಿವಾದಿ ಮೊದಲು ಮಲ್ಲೇಶ್ವರಂ ನ ಕೆ ಇ ಬಿ ನಲ್ಲಿ ಕೆಲಸ ಮಾಡುತ್ತಿದ್ದು, ಈಗ ನಿವೃತ್ತಿ ಹೊಂದಿರುತ್ತಾರೆ. 7 ನೇ ಪ್ರತಿವಾದಿ ಕೆ ಇ ಬಿ ನಲ್ಲಿ ಖಾಯಂ ನೌಕರನಾಗಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ತೀರಿಕೊಂಡ ನಂತರ 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ನಾವು ಮೂರು ಜನ ಸಹೋದರರು ಬೆಂಗಳೂರಿಗೆ ಬಂದಿರುತ್ತೇವೆ. ನರಸಮ್ಮ ನನ್ನ ಹೆಂಡತಿ. ನರಸಮ್ಮರವರು ವಾದಿಗಳ ತಾಯಿ ಎಂದರೆ ನಿಜ. 9 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. 9 ನೇ ಪ್ರತೀವಾದಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ನಿಜ. 9 ನೇ ಪ್ರತಿವಾದಿ ಕೆಲಸಕ್ಕಾಗಿ ಬೆಂಗಳೂರಿಗೆ ಬರಲಿಲ್ಲ ಅವರು ಊರಿನಿಂದ ಹೋಗಿ ಬಂದು ಮಾಡುತ್ತಿದ್ದರು. ದಾವಾ ಆಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ವಾದಿಗಳು ಮತ್ತು ಪ್ರತಿವಾದಿಗಳು ದಾವಾ ಆಸ್ತಿಗಳ ಜಂಟಿ ಸ್ವಾಧೀನತೆ ಹೊಂದಿರುತ್ತೇವೆ ಎಂದರೆ ನಿಜ. ನಾವು ಮೂರು ಜನ ಸಹೋದರರು ಬೆಂಗಳೂರಿನಿಂದ ಕೂಡ್ಲೂರಿಗೆ ದಾವಾ ಆಸ್ತಿಗಳನ್ನು ನೋಡಿಕೊಳ್ಳಲು ಹೋಗಿ ಬಂದು ಮಾಡುತ್ತಿದ್ದೆವು. ನಾವು ಊರಿಗೆ ಹೋದಾಗ ಊರಿನಿಂದ ಅಕ್ಕಿ, ರಾಗಿ ಮತ್ತು ಕಾಳುಕಡ್ಡಿಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಬರುತ್ತಿದ್ದೆವು ಎಂದರೆ ನಿಜ. ಈಗಲೂ ಸಹ ದಾವಾ ಆಸ್ತಿಗಳಲ್ಲಿ ಬೆಳೆದ ಬೆಳೆಯನ್ನು ವಾದಿಗಳು ಮತ್ತು ಪ್ರತಿವಾದಿಗಳು ಹಂಚಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ನಿಜ.

22. ನಾನು 1970 ರಿಂದ 1977 ರವರೆಗೆ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ನನಗೆ ದಿನಕ್ಕೆ 2 1/4 ರೂ ಸಂಬಳ ಕೊಡುತ್ತಿದ್ದರು ಎಂದು ತೋರಿಸಲು ದಾಖಲೆ ಇದೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಬೆಂಗಳೂರಿಗೆ 1970 ರಲ್ಲಿ ಬಂದ ನಂತರ ಯಶವಂತಪುರದ ಬಾಡಿಗೆ ಮನೆಯಲ್ಲಿ ನಾನೊಬ್ಬನೆ ವಾಸ

ಮಾಡುತ್ತಿದ್ದೆ. ನನ್ನ ಮತ್ತು ನರಸಮ್ಮರವರ ವಿವಾಹ 1976 ರಲ್ಲಿ ಆಗಿರುತ್ತದೆ. ನನ್ನ ಮತ್ತು ನರಸಮ್ಮರವರ ಮದುವೆಯ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ನಮ್ಮ ಮದುವೆ ನರಸಮ್ಮರವರ ಮನೆಯಲ್ಲಿ ಯಶವಂತಪುರದಲ್ಲಿ ನಡೆದಿರುತ್ತದೆ. ನನ್ನ ಮತ್ತು ನರಸಮ್ಮರವರ ಮದುವೆ ದಿನಾಂಕಃ 26-06-1975 ರಲ್ಲಿ ಆಗಿರುತ್ತದೆ ಎಂದರೆ ನಿಜ. ಮದುವೆಯ ಮೊದಲು ನರಸಮ್ಮರವರ ಕುಟುಂಬ ನನ್ನ ತಂದೆಯವರಿಗೆ ಹಳೆಯ ಸಂಬಂಧ ಆಗಿರುತ್ತಾರೆ. ನನ್ನ ತಂದೆಗೆ 10 ಜನ ಮಕ್ಕಳು ಇದ್ದುದ್ದರಿಂದ ನನ್ನ ತಂದೆಗೆ ಬಡತನವಿದ್ದು ಜಮೀನಿನಲ್ಲಿ ಜೀವನ ಸಾಗಿಸುವುದು ಕಷ್ಟ ಇತ್ತು ಎಂದರೆ ನಿಜ.

23. ನನ್ನ ಮಾವ ಹನುಮಂತಪ್ಪರವರು ಯಶವಂತಪುರದಲ್ಲಿ ಹಸು ಮತ್ತು ಹೆಮ್ಮೆಗಳನ್ನು ಕಟ್ಟಿಕೊಂಡು ಹಾಲಿನ ವ್ಯಾಪಾರ ಮಾಡುತ್ತಿದ್ದರು ಎಂದರೆ ನಿಜ. ಹನುಮಂತಪ್ಪರವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ನನ್ನ ಹೆಂಡತಿ ಒಬ್ಬರೆ ಹೆಣ್ಣು ಮಗಳು ಎಂದರೆ ನಿಜ. ನನ್ನ ಮತ್ತು ನರಸಮ್ಮರವರ ಮದುವೆಯಾಗುವ 1 ವರ್ಷದ ಮೊದಲೇ ಮದುವೆ ಮಾತುಕತೆ ಆಗಿತ್ತು. ನನ್ನ ಮಾವನಿಗೆ ನನ್ನ ಹೆಂಡತಿ ಒಬ್ಬಳೆ ಮಗಳು ಆಗಿದ್ದರಿಂದ ಅವರ ಮೇಲೆ ಪ್ರೀತಿ ಇತ್ತು ಎಂದರೆ ಸರಿಯಲ್ಲ. ಆದ ಕಾರಣ ಹನುಮಂತಪ್ಪರವರು ತಮ್ಮ ಮನೆಯ ಮುಂದೆ ತಮ್ಮ ಖರ್ಚಿನಲ್ಲಿ ನನ್ನ ಮತ್ತು ನರಸಮ್ಮರವರ ಮದುವೆ ಮಾಡಿರುತ್ತಾರೆ ಎಂದರೆ ನಿಜ. ಮದುವೆಯ ನಂತರ ನಾವು ಬಾಡಿಗೆ ಮನೆಯಲ್ಲಿ ವಾಸ ಮಾಡಲು ಪ್ರಾರಂಭ ಮಾಡಿದೆವು. ಬೆಂಗಳೂರಿನಲ್ಲಿ ನಾವು ವಾಸ ಮಾಡುತ್ತಿದ್ದ ಮನೆಗೂ ಮತ್ತು ನನ್ನ ಮಾವನ ಮನೆಗೂ ಅರ್ಧ ಕಿ ಮೀ ದೂರ ಇತ್ತು ಎಂದರೆ ನಿಜ. ನನ್ನ ನಾಲ್ಕು ಜನ ಬಾಮೈದರವರು ಒಳ್ಳೆಯ ವ್ಯಾಪಾರಸ್ಥರು ಆಗಿದ್ದರು ಎಂದರೆ ನಿಜ. ಅವರು ಒಳ್ಳೆ ಆದಾಯ ಸಂಪಾದನೆ ಮಾಡುತ್ತಿದ್ದರು ಎಂದರೆ ನಿಜ. ನನ್ನ ಹೆಂಡತಿ ನಾಲ್ಕು ಜನ ಬಾಮೈದರಿಗೆ ಒಬ್ಬಳೇ ಸಹೋದರಿಯಾಗಿದ್ದರಿಂದ ಅವರ ಮೇಲೆ ಪ್ರೀತಿ ಇತ್ತು ಎಂದರೆ ನಿಜ. ನನ್ನ ಬಾಮೈದರು ನನ್ನ ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ನಿಜ. ನನ್ನ ಹೆಂಡತಿಯ ಸಹೋದರರು ನನ್ನ ಮನೆಗೆ ಬಂದು ನನ್ನ ಹೆಂಡತಿಯ ಯೋಗಕ್ಷೇಮ ಮತ್ತು ಕಷ್ಟ ಸುಖ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

23. ನಾನು ನರಸಮ್ಮರವರನ್ನು ಮದುವೆಯಾಗುವವರೆಗೂ ನನಗೆ ಸ್ವಂತ ಉದ್ಯೋಗ ಮತ್ತು ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಆ ರೀತಿಯಾಗಿ ಉದ್ಯೋಗ ಮತ್ತು ಆದಾಯ ಇತ್ತು ಎಂದು ತೋರಿಸಲು ನನ್ನ ಕಡೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಹನುಮಂತಪ್ಪರವರು ಮತ್ತು ನನ್ನ ನಾಲ್ಕು ಜನ ಬಾಮೈದರು ನನ್ನ ಹೆಂಡತಿ ಮೇಲಿನ ಪ್ರೀತಿಯಿಂದ ನಮ್ಮ ಕುಟುಂಬಕ್ಕೆ ಹಣಕಾಸಿನ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ.

24. ಹನುಮಂತಪ್ಪರವರು ನನ್ನ ತಂದೆಯ ಹಳೆಯ ಸಂಬಂಧಿಯಾಗಿದ್ದು ಅವರು ನನ್ನ ಹೆಂಡತಿಯ ಮೇಲಿನ ಪ್ರೀತಿಯಿಂದ ಜಾರದಬಂಡೆ ಕಾವಲ್ ನಲ್ಲಿ ನಿವೇಶನ ಖರೀದಿ ಮಾಡಲು ಹಣ ಕೊಟ್ಟಿದ್ದರು

ಎಂದರೆ ಸರಿಯಲ್ಲ. ಹನುಮಂತಪ್ಪ ಮತ್ತು ಅವರ ಮಕ್ಕಳು ಕೊಟ್ಟ ಹಣದಿಂದ ನಾನು ಜಾರದ ಬಂಡೆ ಕಾವಲ್ ನಲ್ಲಿ ನಿವೇಶನವನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು ಜಾರದಬಂಡೆ ಕಾವಲ್ ನಲ್ಲಿ ನಿವೇಶನವನ್ನು 1975 ರಲ್ಲಿ ಖರೀದಿ ಮಾಡಿದ್ದೆ. ನಾನು ಆ ನಿವೇಶವನ್ನು 1 ಸಾವಿರ ರೂಗಳಿಗೆ ಖರೀದಿ ಮಾಡಿದ್ದೆ.

25. ನನ್ನ ತಂದೆ ತಮ್ಮ ಮಕ್ಕಳ ವಿದ್ಯಾಭ್ಯಾಸ ಮಾಡಿಸಿ ಮತ್ತು ಮದುವೆಗಳನ್ನು ಮಾಡಿದ್ದರಿಂದ ಅವರು ಆರ್ಥಿಕವಾಗಿ ಸಮರ್ಥರು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 1 ನೇ ದಾವಾ ಆಸ್ತಿಯಲ್ಲಿ ಅಕ್ಕಿ, ಹುರುಳಿ ಮತ್ತು ರಾಗಿ ಬೆಳೆಗಳನ್ನು ಬೆಳೆಯುತ್ತಿದ್ದರು. ನನ್ನ ತಂದೆ ಮಳೆಯ ಆಶ್ರಿತ ಬೆಳೆ ಬೆಳೆಯುತ್ತಿದ್ದರು ಎಂದರೆ ನಿಜ. 2 ನೇ ದಾವಾ ಆಸ್ತಿಯಲ್ಲಿ ನನ್ನ ತಂದೆ ರಾಗಿ ಮತ್ತು ಹುರುಳಿ ಮಳೆಯ ಆಶ್ರಿತ ಬೆಳೆ ಬೆಳೆಯುತ್ತಿದ್ದರು ಎಂದರೆ ನಿಜ. ದಾವಾ ಆಸ್ತಿಗಳಲ್ಲಿ ಬೆಳೆಯುತ್ತಿದ್ದ ಬೆಳೆ ನಮ್ಮ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಕಾಗುತ್ತಿತ್ತು ಎಂದು ಹೇಳುತ್ತಾರೆ. ನನ್ನ ಮದುವೆಯಾದ ನಂತರ ಸಹೋದರರ ಮದುವೆ ಹಿಂದೆ ಮುಂದೆ ಆಗಿರುತ್ತದೆ. ನಾನು ಮತ್ತು ನನ್ನ ಸಹೋದರರು ಸಂಪದಾನೆ ಮಾಡಿದ ಆದಾಯ ತಮ್ಮ ತಮ್ಮ ಕುಟುಂಬಗಳಿಗೆ ಸಾಕಾಗುತ್ತಿತ್ತು ಎಂದರೆ ನಾವು ಒಟ್ಟು ಕುಟುಂಬದಿಂದ ಸಂಸಾರ ನಡೆಸುತ್ತಿದ್ದೆವು ಎಂದು ಹೇಳುತ್ತಾರೆ.

26. 7 ನೇ ಪ್ರತಿವಾದಿಗೆ ನಾಲ್ಕು ಜನ ಮಕ್ಕಳು. 7 ನೇ ಪ್ರತಿವಾದಿಗೆ ತಾವು ಮಾಡುವ ಕೆಲಸದಿಂದ ಸ್ವಂತ ಎಷ್ಟು ಆದಾಯ ಬರುತ್ತಿತ್ತು ಗೊತ್ತಿಲ್ಲ. ಅದೇ ರೀತಿ 9 ಮತ್ತು 11 ನೇ ಪ್ರತಿವಾದಿಗಳಿಗೆ ತಮ್ಮ ಸ್ವಂತ ಉದ್ಯೋಗದಿಂದ ಎಷ್ಟು ಆದಾಯ ಬರುತ್ತಿತ್ತು ಗೊತ್ತಿಲ್ಲ. 7, 9 ಮತ್ತು 11 ನೇ ಪ್ರತಿವಾದಿಗಳು ನನಗೆ ತಮ್ಮ ಆದಾಯದ ಲೆಕ್ಕ ಕೊಡುತ್ತಿರಲಿಲ್ಲ ಆದ ಕಾರಣ ನನಗೆ ಅವರ ಆದಾಯದ ಬಗ್ಗೆ ಮಾಹಿತಿ ಇಲ್ಲ ಎಂದರೆ 7, 9 ಮತ್ತು 11 ನೇ ಪ್ರತಿವಾದಿಗಳು ನನಗೆ ತಮ್ಮ ಸಂಪಾದನೆಯ ಲೆಕ್ಕ ಕೊಡುತ್ತಿರಲಿಲ್ಲ ಆದರೆ ನಾವೆಲ್ಲ ಒಟ್ಟು ಕುಟುಂಬದಲ್ಲಿದ್ದೆವು ಎಂದು ಹೇಳುತ್ತಾರೆ.

27. 9 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇರುತ್ತಾರೆ. 11 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇರುತ್ತಾರೆ. 7, 9 ಮತ್ತು 11 ನೇ ಪ್ರತಿವಾದಿಗಳು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ನಿಜ. ಬೆಂಗಳೂರಿನ ಬಾಡಿಗೆ ಮನೆ ಎಂದರೆ ಖರ್ಚು ವೆಚ್ಚ ಜಾಸ್ತಿ ಇರುತ್ತದೆ ಎಂದರೆ ನಿಜ. 7, 9 ಮತ್ತು 11 ನೇ ಪ್ರತಿವಾದಿಗಳು ತಾವು ಗಳಿಸಿದ ಆದಾಯ ಬಾಡಿಗೆ ಮನೆಗೆ ಮತ್ತು ದವಸ ಧಾನ್ಯ ತರಲು ಸಾಕಾಗುತ್ತದೆ ಎಂದರೆ ನಿಜ. ಆದ ಕಾರಣ 7, 9 ಮತ್ತು 11 ನೇ ಪ್ರತಿವಾದಿಗಳಿಗೆ ತಮಗೆ ಬಂದ ಆದಾಯದಲ್ಲಿ ಉಳಿತಾಯ ಇರಲಿಲ್ಲ ಎಂದರೆ ಸರಿಯಲ್ಲ.

28. ಜಾರದಬಂಡೆ ಕಾವಲ್ ನಲ್ಲಿ ನಿವೇಶನವನ್ನು ಪುಷ್ಪಾವತಮ್ಮ ಮತ್ತು ಇನ್ನೊಬ್ಬರ ಕಡೆಯಿಂದ ಖರೀದಿ ಮಾಡಿದ್ದು, ಇನ್ನೊಬ್ಬರ ಹೆಸರು ಗೊತ್ತಿಲ್ಲ. ಜಾರದಬಂಡೆ ಕಾಲವ್ ನಲ್ಲಿ ಆಸ್ತಿಯನ್ನು

ಖರೀದಿಸುವಾಗ ಖರೀದಿ ಮಾತುಕತೆಗೆ ಹನುಮಂತಪ್ಪ ಮತ್ತು ನನ್ನ ತಂದೆ ಬಂದಿದ್ದರು ಎಂದರೆ ನನ್ನ ತಂದೆ ಬಂದಿದ್ದು ಹನುಮಂತಪ್ಪ ಬಂದಿರಲಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಕೋರಿಕೆಯ ಮೇರೆಗೆ ಹನುಮಂತಪ್ಪರವರು ಜಾರದ ಬಂಡೆ ಕಾವಲ್ ನಲ್ಲಿ ನನ್ನ ಹೆಸರಿಗೆ ನಿವೇಶನವನ್ನು ಖರೀದಿ ಮಾಡಿ ಅವರೇ ಖರೀದಿ ಮಾತುಕತೆಯಲ್ಲಿ ಭಾಗ ವಹಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಕೋರಿಕೆಯ ಮೇರೆಗೆ ಹನುಮಂತಪ್ಪರವರು ಹಣದ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ.

29. ಜಾರದಬಂಡೆ ಕಾವಲ್ ನ ನಿವೇಶನವನ್ನು ನಾನು ನನ್ನ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿಲ್ಲ ಅದು ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ. ಒಟ್ಟು ಕುಟುಂಬದ ಆದಾಯ ಎಂದರೆ ರಾಗಿ ಮತ್ತು ಹುರುಳಿಯಿಂದ ಬರುವ ಆದಾಯ ಮಾತ್ರ ಆಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ತರಕಾರಿಗಳನ್ನು ಬೆಳೆಯುತ್ತಿದ್ದೆವು ಎಂದು ಹೇಳುತ್ತಾರೆ. ನಮ್ಮ ಒಟ್ಟು ಕುಟುಂಬಕ್ಕೆ ವರ್ಷಕ್ಕೆ ಎಷ್ಟು ಆದಾಯ ಬರುತ್ತಿತ್ತು ಗೊತ್ತಿಲ್ಲ. ನಮಗೆ ಊರಿನಲ್ಲಿ ಬಂದ ಆದಾಯ ನಮ್ಮ ಒಟ್ಟು ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿತ್ತು ಎಂದರೆ ನಿಜ. ಜಾರದಬಂಡೆ ಕಾವಲ್ ನಲ್ಲಿರುವ ನಿವೇಶನ ಖರೀದಿಗಾಗಿ ಸಾವಿರ ರೂ ಹಣ ಒಟ್ಟು ಕುಟುಂಬದಿಂದ ಬಂದಿರುತ್ತದೆ. ಆ ಹಣವನ್ನು ನನಗೆ ನನ್ನ ತಂದೆ ಕೊಟ್ಟಿರುತ್ತಾರೆ. ನನ್ನ ತಂದೆ ನನಗೆ ಒಂದು ಸಾವಿರ ರೂ ಹಣ ಕೊಟ್ಟಿರುವ ಬಗ್ಗೆ ದಾಖಲೆ ಇರುವುದಿಲ್ಲ. ನಿವೇಶನವನ್ನು ಖರೀದಿ ಮಾಡಲು ನನ್ನ ಒಟ್ಟು ಕುಟುಂಬದವರು ನನಗೆ ಹಣದ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿದ್ದು ಓಡಾಡಲು ಆಗದೇ ಇದ್ದಿದ್ದರಿಂದ ಜಾರದಬಂಡೆ ಕಾವಲ್ ನ ಆಸ್ತಿಯನ್ನು ನನ್ನ ಹೆಸರಿಗೆ ಖರೀದಿ ಮಾಡಿದ್ದರು. 3 ನೇ ಪ್ರತಿವಾದಿಗೆ ತಿಳುವಳಿಕೆ ಇಲ್ಲದೇ ಇದ್ದುದ್ದರಿಂದ ಅವರ ಹೆಸರಿಗೆ ಖರೀದಿ ಮಾಡಿರಲಿಲ್ಲ. ಜಾರದ ಬಂಡೆ ಕಾವಲ್ ನ ಆಸ್ತಿಯನ್ನು ಖರೀದಿ ಮಾಡಲು ನನ್ನ ಸ್ವಂತ ಆದಾಯವನ್ನು ಉಪಯೋಗಿಸಿಲ್ಲ. 1977 ರಿಂದ ನಾನು ಕೇಂದ್ರ ಕಾರಾಗೃಹದಲ್ಲಿ ವಾರ್ಡನ್ ಎಂದು ಕೆಲಸ ಮಾಡಿದ್ದೆ. ಈ ಬಗ್ಗೆ ನನ್ನ ಕಡೆ ದಾಖಲೆ ಇರುವುದಿಲ್ಲ. ನಾನು ಕೇಂದ್ರ ಕಾರಾಗೃಹದಲ್ಲಿ 7 ವರ್ಷ ಕೆಲಸ ಮಾಡಿದ್ದೆ. ಆಗ ನನಗೆ ತಿಂಗಳಿಗೆ 240 ರೂ ಸಂಬಳ ಬರುತ್ತಿತ್ತು.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**